**ಶ್ರೀ. ಸುಬೋಧ್‌ಯಾದವ್ I.A.S ರಾಜ್ಯ ಯೋಜನಾ ನಿರ್ದೇಶಕರು, ಸ.ಶಿ.ಅ/ಆರ್.ಎಂ.ಎಸ್.ಎ ಬೆಂಗಳೂರು ಇವರು ದಿನಾಂಕ: 13.07.2013ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕ್ಲಸ್ಟರ್ ಸಮಾಲೋಚನಾ ಸಭೆಗಳಿಗೆ ನೀಡಿದ ಭೇಟಿಯ ವರದಿ:**

1. ವಾಜರಹಳ್ಳಿ ಕ್ಲಸ್ಟರ್‌ನಲ್ಲಿ ನಡೆಯುತ್ತಿದ್ದ ಸಮಾಲೋಚನಾ ಸಭೆಯಲ್ಲಿ ಭಾಗವಹಿಸಲಾಯಿತು. SAP ಬಗ್ಗೆ ಸಂಪನ್ಮೂಲ ವ್ಯಕ್ತಿಗಳು ವಿವರಣೆ ನೀಡುತ್ತಿದ್ದು, ವಿಷಯದ ಬಗ್ಗೆ ಅನುಭವ ಹಂಚಿಕೆ, ಸಾಧಕಬಾಧಕಗಳು, ಶಾಲಾ ಶೈಕ್ಷಣಿಕ ಯೋಜನೆಯನ್ನು ಇನ್ನೂ ಉತ್ತಮ ರೀತಿಯಲ್ಲಿ ರೂಪಿಸಿ ಅನುಷ್ಠಾನಗೊಳಿಸುವ ಬಗ್ಗೆ ಸಲಹೆಗಳು ಇತ್ಯಾದಿಗಳು ಈ ಸಭೆಯಲ್ಲಿ ಚರ್ಚಿಸಬೇಕಾಗಿದ್ದು ಈ ರೀತಿಯಲ್ಲಿ ಸಭೆ ಆಯೋಜನೆಗೊಂಡಿರದೆ ಕೇವಲ ನಮೂನೆಗಳ ಪರಿಚಯಕಷ್ಟೆ ಸೀಮಿತವಾಗಿತ್ತು. ಶಾಲೆಯಿಂದ ಹೊರಗುಳಿದ ಮಕ್ಕಳು ಎಂಬ ವಿಷಯದ ಬಗ್ಗೆ ಸಂಪನ್ಮೂಲ ವ್ಯಕ್ತಿಗಳು ವಿವರಣೆ ನೀಡಿದರು ಶಾಲೆಗೆ ದಾಖಲಾದ ಮಕ್ಕಳು 8 ವರ್ಷದ ಶಿಕ್ಷಣ ಪೂರ್ಣಗೊಳಿಸುವಂತೆ ಯಾವುದೇ ಮಗು ಶಾಲೆಯಿಂದ ಹೊರಗುಳಿಯದಂತೆ ಕ್ರಮವಹಿಸಲು ತಿಳಿಸಲಾಯಿತು. ಶಾಲೆಗೆ ದಾಖಲಾದ ಎಲ್ಲಾ ಮಕ್ಕಳು ಶಿಕ್ಷಣವನ್ನು ಮುಂದುವರಿಸುತ್ತಿರುವ ಬಗ್ಗೆ ಶಾಲಾ ಮುಖ್ಯ ಶಿಕ್ಷಕರು/ಶಿಕ್ಷಕರು/ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳು ಮೇಲ್ವಿಚಾರಣೆ ನಡೆಸಲು, ತಿಳಿಸಲಾಯಿತು, ಗುರ್ತಿಸಿದ ವಿಕಲಚೇತನ ಮಕ್ಕಳನ್ನು ತಾಲ್ಲೂಕು ಹಂತದ ವೈದ್ಯಕೀಯ ಶಿಬಿರಕ್ಕೆ ಕರೆತಂದು ತಪಾಸಣೆ ಮಾಡಿಸಿ, ಅಗತ್ಯ ಸಾಧನ ಸಲಕರಣೆಗಳನ್ನು ಸಕಾಲದಲ್ಲಿ ಒದಗಿಸುವ ಬಗ್ಗೆ ತಿಳಿಸಲಾಯಿತು, CCE ಬಗ್ಗೆ ಶಿಕ್ಷಕರೊಂದಿಗೆ ಸಂವಾದ ನಡೆಸಲಾಯಿತು, ವೇಳಾಪಟ್ಟಿಯಂತೆ ನಿಗಧಿಪಡಿಸಿದ ವಿಷಯಗಳ ಬಗ್ಗೆ ಚರ್ಚಿಸಿ ಅನುಮಾನಗಳಿದ್ದಲ್ಲಿ ಬಗೆಹರಿಸಿಕೊಳ್ಳಲು ತಿಳಿಸಲಾಯಿತು.

   ಕ್ರಮ: ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ/ತಾಲ್ಲೂಕ್ ಸಂಪನ್ಮೂಲ ವ್ಯಕ್ತಿ/ಕ್ಷೇತ್ರ ಶಿಕ್ಷಣಾಧಿಕಾರಿಗಳು/ಉಪನಿರ್ದೇಶಕರು (ಆ)/ಉಪನಿರ್ದೇಶಕರು (ಅಭಿವೃದ್ಧಿ)

2. ಬೊಮ್ಮನಹಳ್ಳಿಯಲ್ಲಿ ನಡೆಯುತ್ತಿದ್ದ ಕ್ಲಸ್ಟರ್ ಸಮಾಲೋಚನಾ ಸಭೆಗೆ ಭೇಟಿ ನೀಡಿ SAP, ಶಾಲೆಯಿಂದ ಹೊರಗುಳಿದ ಮಕ್ಕಳು, CCE, CWSN ಮಕ್ಕಳ ವೈದ್ಯಕೀಯ ತಪಾಸನೆ ಮತ್ತು ಸಾಧನ ಸಲಕರಣೆಗಳ ವಿತರಣೆ ಬಗ್ಗೆ ಚರ್ಚಿಸಲಾಯಿತು, ಶಿಕ್ಷಕರೊಂದಿಗೆ ತಮ್ಮ ಶಾಲೆಗೆ ದಾಖಲಾದ ಮಕ್ಕಳು 8 ವರ್ಷದ ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸುವ ಬಗ್ಗೆ, ಶಾಲೆಯನ್ನು ತೊರೆಯದಂತೆ ನಿಗವಹಿಸುವಂತೆ ತಿಳಿಸಲಾಯಿತು.

   ಕ್ರಮ: DDPI (A)/DDPI (Dev)/DYPC/BEO/BRC/CRC

3. ಕನಸವಾಡಿ ಕಾಲೋನಿ ದೊಡ್ಡಬಳ್ಳಾಪುರ ತಾಲ್ಲೂಕ್: ಈ ಕೇಂದ್ರದಲ್ಲಿ ನಡೆಯುತ್ತಿದ್ದ ಕ್ಲಸ್ಟರ್ ಸಮಾಲೋಚನಾ ಸಭೆಯಲ್ಲಿ ಭಾಗವಹಿಸಲಾಯಿತು. ಕ್ಲಸ್ಟರ್‌ನಲ್ಲಿ ಶಾಲೆಬಿಟ್ಟ ಮಕ್ಕಳ ಬಗ್ಗೆ ವಿವರ ಪಡೆಯಲಾಯಿತು. ಮಕ್ಕಳ ಜಾಡು ಹಿಡಿಯುವ ಬಗ್ಗೆ ಶಿಕ್ಷಕರಿಗೆ ಮತ್ತು ಅಧಿಕಾರಿಗೆ ಮಾಹಿತಿ ನೀಡಲಾಯಿತು. ಶಾಲಾ ಶೈಕ್ಷಣಿಕ ಯೋಜನೆಯನ್ನು ಉತ್ತಮವಾಗಿ ಸಿದ್ಧಪಡಿಸಿ ಅನುಷ್ಠಾನಗೊಳಿಸುವ ಬಗ್ಗೆ ಚರ್ಚಿಸಲಾಯಿತು.

   ಕ್ರಮ: DDPI (A)/DDPI(Dev)/DYPC/BEO/BRC/CRP

4. ಅಂಜನಮೂರ್ತಿನಗರ ದೊಡ್ಡಬಳ್ಳಾಪುರ ತಾ॥ ಇಲ್ಲಿ ನಡೆಯುತ್ತಿದ್ದ ಕ್ಲಸ್ಟರ್ ಸಮಾಲೋಚನಾ ಸಭೆಯಲ್ಲಿ ಭಾಗವಹಿಸಿ, SAP ಸಿದ್ಧಪಡಿಸಿ ಅನುಷ್ಠಾನಗೊಳಿಸುವ ಬಗ್ಗೆ ಚರ್ಚಿಸಲಾಯಿತು. ಕ್ಲಸ್ಟರ್‌ನಲ್ಲಿ 1ನೇ ತರಗತಿಯಲ್ಲಿ 2011-12 ಸಾಲಿನಲ್ಲಿ ದಾಖಲಾದ ಮಕ್ಕಳಲ್ಲಿ 2012-13ನೇ ಸಾಲಿಗೆ 2ನೇ ತರಗತಿಗೆ 14 ಮಕ್ಕಳು ಕಡಿಮೆ ದಾಖಲಾಗಿದ್ದು ಇವರು ಶಾಲೆ ತೊರೆದವರಾಗಿರುತ್ತಾರೆ. ಈ ಮಕ್ಕಳು ಯಾವ

ಶಾಲೆಗಳಿಂದ ಶಾಲೆಬಿಟ್ಟಿದ್ದಾರೆ. ಈ ಬಗ್ಗೆ CRPಯವರಿಗೆ ಮಾಹಿತಿ ಇರುವುದಿಲ್ಲ, ಇವರು ಶಾಲೆಬಿಟ್ಟ ಮಕ್ಕಳ ಜಾಡುಹಿಡಿಯುವ ಬಗ್ಗೆ ಕ್ರಮವಹಿಸುತ್ತಿಲ್ಲ, ಕ್ಲಸ್ಟರ್‌ನಲ್ಲಿ 6ರಿಂದ 14 ವರ್ಷದ ವಯೋಮಾನದ ಮಕ್ಕಳಲ್ಲಿ ಶಾಲೆ ತೊರೆದಿರುವ ಮಕ್ಕಳ ವಿವರವನ್ನು 7 ದಿನಗಳಲ್ಲಿ ಕ್ರೋಢೀಕರಿಸಿ ಸಲ್ಲಿಸಲು ತಿಳಿಸಲಾಯಿತು.

ಕ್ರಮ: DDPI (A)/DDPI(Dev)/DYPC/BEO/CRP

ಮೇಲ್ಕಂಡ ಅಂಶಗಳ ಬಗ್ಗೆ ಕ್ರಮಕೈಗೊಂಡು, ಏಳುದಿನಗಳಲ್ಲಿ ವರದಿ ಸಲ್ಲಿಸಲು ತಿಳಿಸಿದೆ.

16.7.13

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ

ಗೆ,

1. ಉಪನಿರ್ದೇಶಕರು (ಆ)/ಉಪನಿರ್ದೇಶಕರು (ಅ)/ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆ.
2. ಕ್ಷೇತ್ರ ಸಮನ್ವಯಾಧಿಕಾರಿಗಳು/ ಕ್ಷೇತ್ರ ಸಂಪನ್ಮೂಲ ವ್ಯಕ್ತಿ ನೆಲಮಂಗಲ ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
3. ಸಮೂಹ ಸಂಪನ್ಮೂಲ ವ್ಯಕ್ತಿ ವಾಜರಹಳ್ಳಿ ಕ್ಲಸ್ಟರ್/ಬೊಮ್ಮನಹಳ್ಳಿ ಕ್ಲಸ್ಟರ್/ಕನಸವಾಡಿ ಕ್ಲಸ್ಟರ್/ ಅಂಜನಮೂರ್ತಿನಗರ ಕ್ಲಸ್ಟರ್.
4. ಸಹ ನಿರ್ದೇಶಕರು (ಗು)/(ಕಾ), ಹಿರಿಯ ಕಾರ್ಯಕ್ರಮಾಧಿಕಾರಿಗಳು (ಗು)/(ಕಾ), ಕಾರ್ಯಕ್ರಮಾಧಿಕಾರಿ (ತರಬೇತಿ)/(ಒಒಎಸ್‌ಸಿ), ಕಿರಿಯ ಕಾರ್ಯಕ್ರಮಾಧಿಕಾರಿ (CWSN) ಸಶಿಅ, ಬೆಂಗಳೂರು.
5. Copy to DSERT / CPI